## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ, ಹಿರಿಯೂರು

ಸಿ.ಸಿ.ನಂ.899/2020

ಪಿರ್ಯಾದಿ : ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

ಆರೋಪಿ : ಮೆಹಬೂಬ್ ಸಾಬ್
ತಂದೆ ಮೊಹಮ್ಮದ್ ಸರ್ದಾರ್ ಸಾಬ್, 37 ವರ್ಷ,
ಕೆಎ.38.4167 ರ ಲಾರಿ ಚಾಲಕ,
ವಾಸಃ ಮೈಲೂರು ರಸ್ತೆ, ಬೀದರ್.

### ಆ ಪಾ ದ ನೆ

ದಿನಾಂಕಃ 26.04.2019 ರಂದು ಸಂಜೆ ಸುಮಾರು 7.15 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಬಡಗೊಲ್ಲರಹಟಿಟ ಗೇಟ್ ಹತ್ತಿರ ಹೊರಕೇರಪ್ಪ ರವರ ಜಮೀನಿನ ಮುಂದಿನ ಎನ್ ಹೆಚ್.150(ಎ) ರಸ್ತೆಯಲ್ಲಿ 1 ನೇ ಆರೋಪಿಯಾದ ನೀವು ಕೆಎ.34.4167 ನೇ ಲಾರಿಯನ್ನು ಹಿರಿಯೂರು ಕಡೆಯಿಂದ ಅತಿವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಬಂದು ಮುಂದೆ ಹೋಗುತ್ತಿದ್ದ ಕೆಎ.44.ಯು.9046 ನೇ ಟಿ.ವಿ.ಎಸ್ ಗೆ ಡಿಕ್ಕಿ ಪಡಿಸಿದ ಪರಿಣಾಮ ಟಿ.ವಿ.ಎಸ್ ಗಾಡಿಯು ಜಖಂಗೊಂಡಿದ್ದು ಚಾಲಕ ಪ್ರೇಮಣ್ಣ ರವರಿಗೆ ಮೈ ಕೈಗೆ ಕಾಲುಗಳಿಗೆ ಬಲವಾದ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿ ಚಿಕಿತ್ಸೆಯ ಬಗ್ಗೆ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಕರೆತಂದಿದ್ದು ವೈದ್ಯರ ಸಲಹೆಯ ಮೇರೆಗೆ ಹೆಚ್ಚಿನ ಚಿಕಿತ್ಸೆ ಗಾಗಿ ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಹಿರಿಯೂರಿನ ಟಿಬಿ ಸರ್ಕಲ್ ಬಳಿ ಸುಮಾರು ರಾತ್ರಿ 8.50 ರ ಸಮಯದಲ್ಲಿ ಪ್ರೇಮಣ್ಣ ರವರು ಚಿಕಿತ್ಸೆ ಫಲಕಾರಿಯಾಗಿದೇ ಮೃತ ಪಟ್ಟಿದ್ದು ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 279 ಮತ್ತು 304(ಎ) ರಂತೆ ದಂಡಿಸಲ್ಪಡುವ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇದೆ.

ಪ್ರ 1. ನಿಮಗೆ ಓದಿ ಹೇಳಿ ಕೇಳಿದ ಆಪಾದನೆ ತಿಳಿಯಿತೇ ?

ಉತ್ತರಃ

ಪ್ರ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

(ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ **29.03.2023**
ಸ್ಥಳಃ ಹಿರಿಯೂರು

(ಮೊಹಮ್ಮದ್ ಮೊಯಿನುದ್ದಿನ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹಿರಿಯೂರು